**ಸಾಕ್ಷಿಯನ್ನು ದಿನಾಂಕಃ 12.07.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಕೆ.ಸಿ.ಎಸ್. ವಕೀಲರಿಂದಃ**

ನಿ.ಪಿ.-9 ರಲ್ಲಿ ದಾವಾ ಸ್ವತ್ತು ನನ್ನ ತಂದೆಗೆ ಸ್ವಯಾರ್ಜಿತವಾಗಿ ಬಂದ ಸ್ವತ್ತಾಗಿರುತ್ತದೆಂದು ನಮೂದಿಸಿರುತ್ತಾರೆಂದರೆ ಸರಿ. ನನ್ನ ತಂದೆಗೆ ಯಾವ ದಾಖಲೆ ಮುಖಾಂತರ ಬಂದಿರುತ್ತದೆಂದು ನನಗೆ ನೆನಪಿಲ್ಲ. ದಾನ ಪತ್ರ ಬರೆದುಕೊಡುವ ಸಮಯದಲ್ಲಿ ನನ್ನ ತಂದೆ ಮೂಲ ದಾಖಲೆಗಳನ್ನು ಕೊಟ್ಟಿರುತ್ತಾರೋ ಇಲ್ಲವೋ ನನಗೆ ನೆನಪಿಲ್ಲ. ದಾನ ಪತ್ರ ಬರೆದುಕೊಟ್ಟಿರುವ ವಿಷಯ ನನಗೆ ನೆನಪಿರುತ್ತದೆ. ಪಂಚಾಯಿತಿಯಿಂದ ನೀಡಿದ ಎನ್.ಒ.ಸಿ. ಆಧಾರದ ಮೇಲೆ ದಾನ ಪತ್ರ ಮಾಡಿರುತ್ತಾರೆ. ಸದರಿ ಎನ್.ಒ.ಸಿ. ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ದಾವೆ ಸಲ್ಲಿಸುವ ಸಮಯದಲ್ಲಿ ಡಿಮ್ಯಾಂಡ್ ಮತ್ತು ಅಸೆಸ್ ಮೆಂಟ್ ರಿಜಿಸ್ಟರ್ ಎಕ್ಸಟ್ರಾಕ್ಟ್ ಗಳನ್ನು ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ಡಿಮ್ಯಾಂಡ್ ಮತ್ತು ಅಸೆಸ್ ಮೆಂಟ್ ರಿಜಿಸ್ಟರ್ ಎಕ್ಸಟ್ರಾಕ್ಟ್ ಗಳು 2006, 2007 ಮತ್ತು 2013 ನೇ ಇಸವಿಗೆ ಸಂಬಂಧಪಟ್ಟ ದಾಖಲೆಗಳಾಗಿರುತ್ತವೆಂದರೆ ಸರಿ. ಈಗಾಗಲೇ ಪ್ರತಿವಾದಿಗಳ ಮೇಲೆ ದಾವೆ ಸಲ್ಲಿಸುವ ಸಮಯದಲ್ಲಿ ಸೃಷ್ಟಿ ಮಾಡಿಕೊಂಡ ದಾಖಲೆಗಳ ಆಧಾರದ ಮೇಲೆ ಈ ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ನನ್ನ ತಾತನ ಹೆಸರು ಚನ್ನೇಗೌಡ. ನಮ್ಮ ಕುಟುಂಬದ ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಯಾರ ಹೆಂಡತಿ, 2 ಮತ್ತು 3 ನೇ ಪ್ರತಿವಾದಿಗಳು ಯಾರ ಮಕ್ಕಳು ಎಂದು ನನಗೆ ಗೊತ್ತಿಲ್ಲ. 4 ಮತ್ತು 5 ನೇ ಪ್ರತಿವಾದಿಗಳು

ಯಾರು ಎಂದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ, ನನ್ನ ತಂದೆ ಬೈರಪ್ಪ ಮತ್ತು ಬಸವರಾಜು ಹಾಗು ವೀರಭದ್ರಪ್ಪರವರು ಅಣ್ಣ-ತಮ್ಮಂದಿರಾಗಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಸಲ್ಲಿಸಿರುವ ತಕರಾರಿನ ವಿಷಯಗಳನ್ನು ತಿಳಿದುಕೊಂಡಿರುತ್ತೇನೆ. ಲಿಖಿತ ಹೇಳಿಕೆಯಲ್ಲಿ ಶಿವಣ್ಣ ಯಾರು ಮತ್ತು ಅವರ ಸಂಬಂಧಗಳ ಬಗ್ಗೆ ತಿಳಿಸಿರುತ್ತಾರೆಂದರೆ ಅದರ ಬಗ್ಗೆ ನಾನು ತಿಳಿದುಕೊಂಡಿಲ್ಲ. 1 ಮತ್ತು 2 ನೇ ಪ್ರತಿವಾದಿಗಳ ಸ್ವತ್ತಿಗೆ ತಿರುಗಾಡಲು ದಕ್ಷಿಣೋತ್ತರವಾಗಿ ರಸ್ತೆ ಇರುತ್ತದೆಂದರೆ ಸರಿಯಲ್ಲ. ಆ ರಸ್ತೆಯ ಪೂರ್ವ ಭಾಗದಲ್ಲಿ 4 ನೇ ಪ್ರತಿವಾದಿಯ ಮನೆ ಇರುತ್ತದೆಂದರೆ ಸರಿಯಲ್ಲ. ಮೂಲ ದಾವೆ ಸಂಖ್ಯೆ 94/2007 ರಲ್ಲಿ ರಾಜಿಯಾಗಿರುವ ಸ್ವತ್ತಿಗೆ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತಾಗಿರುವುದಿಲ್ಲ ಮತ್ತು ನನ್ನ ಹೆಸರಿಗೆ ದಾನ ಪತ್ರ ಬರೆದುಕೊಡಲು ನನ್ನ ತಂದೆಗೆ ಯಾವುದೇ ಅಧಿಕಾರವಿರುವುದಿಲ್ಲವೆಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನ್ನ ತಂದೆಯಾಗಲೀ, ನಾನಾಗಲೀ ಸ್ವಾಧೀನದಲ್ಲಿಲ್ಲವೆಂದರೆ ಸರಿಯಲ್ಲ. ನನ್ನ ತಾತ ಮತ್ತು ಹೆಚ್.ಎಸ್. ಶಿವಣ್ಣರವರು ಸೇರಿ ಪಿತ್ರಾರ್ಜಿತ ಸ್ವತ್ತುಗಳನ್ನು ದಿನಾಂಕಃ 09.10.1964 ರಲ್ಲಿಯೇ ನೋಂದಾಯಿತ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಎಷ್ಟು ಜನರಿಗೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆಂದರೆ ನನ್ನ ತಂದೆ ಯಾವ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ. ನನ್ನ ತಂದೆ ಬರೆದುಕೊಟ್ಟಿರುವ ಕ್ರಯ ಪತ್ರಗಳಲ್ಲಿ ತನ್ನ ಹಿಸ್ಸೆಗೆ ಬಂದ ಆಸ್ತಿಗಳನ್ನು ಎಂದು ನಮೂದಿಸಿರುವುದರಿಂದ ಈ ಹಿಂದೆ ನನ್ನ ತಂದೆ ವಿಭಾಗ ಕೋರಿ ಸಲ್ಲಿಸಿದ್ದ ದಾವೆ ವಜಾ ಆಗಿರುತ್ತದೆಂದರೆ ಸರಿಯಲ್ಲ. ನನ್ನ

ಕುಟುಂಬದ ಎಲ್ಲಾ ವಿಚಾರಗಳು ನನಗೆ ಸಂಪೂರ್ಣವಾಗಿ ಗೊತ್ತಿದ್ದರೂ ಕೂಡ ಸತ್ಯಾಂಶ ಗೊತ್ತಾಗುತ್ತದೆ ಎಂಬ ಉದ್ದೇಶದಿಂದ ನನಗೆ ಗೊತ್ತಿಲ್ಲ ಮತ್ತು ನೆನಪಿಲ್ಲ ಎಂದು ಉತ್ತರ ನೀಡುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತಿಗು ಮತ್ತು ನನಗು ಯಾವುದೇ ಸಂಬಂಧವಿಲ್ಲದಿದ್ದರು ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪ್ರತಿವಾದಿಗಳು ದಿನಾಂಕಃ 25.07.2018 ಮತ್ತು ದಿನಾಂಕಃ 01.08.2018 ರಂದು ತೊಂದರೆ ಕೊಡಲು ಬಂದಿರುತ್ತಾರೆ. ನಾನು ವಾದ ಪತ್ರದಲ್ಲಿ ಬರೆಸಿರುವ ದಿನಾಂಕಗಳು ನನಗೆ ನೆನಪಿರುತ್ತವೆ ಆದರೆ ಕುಟುಂಬದ ವಿಚಾರಗಳ ಬಗ್ಗೆ ನನಗೆ ನೆನಪಿಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**